Visitors in the Governor's Gallery

ಶ್ರೀ ಎಸ್. ಬಂಗಾರಪ್ಪ (ಸೊರಬ).—ನಾವು ಈ ಸದನದ ಘನತೆ, ಗಾಂಭೀರ್ಯ ಮತ್ತು ಮರ್ಯಾದೆ—ಇವುಗಳನ್ನು ಕಾಪಾಡುವುದಕ್ಕೋಸ್ಕರ ಹಲವಾರುಸಾರಿ ಪ್ರಯತ್ನ ಪಟ್ಟಿದ್ದೇವೆ. ಯಾರ್ಯಾರು ಈ ಸಭೆಯಲ್ಲಿ ಎಲ್ಲೆಲ್ಲಿ ಕೂತುಕೊಳ್ಳಬೇಕೆಂದು ರೂಲ್ಸ್‌ನಲ್ಲಿದೆ. ಶಾಸನ ಸಭಾ ಸದಸ್ಯರು, ಈ ಸಭೆಯಲ್ಲಿರತಕ್ಕ ಸೀಟುಗಳಲ್ಲಿಯೂ, ವಿಜಿಟರ್ಸ್ ವಿಜಿಟರ್ಸ್ ಗ್ಯಾಲರಿಯಲ್ಲಿಯೂ, ಅಧಿಕಾರಿಗಳು ಆಫೀಸರ್ಸ್ ಗ್ಯಾಲರಿಯಲ್ಲಿಯೂ ಮತ್ತು ಪತ್ರಿಕಾ ವರದಿಗಾರರು ಪ್ರೆಸ್ ಗ್ಯಾಲರಿಯಲ್ಲಿಯೂ ಸ್ಪೀಕರ್ ಅವರಿಗೆ ಸಂಬಂಧಪಟ್ಟವರು ಮತ್ತು ಅವರ ಅನುಮತಿ ಪಡೆದವರು ಸ್ಪೀಕರ್ ಗ್ಯಾಲರಿಯಲ್ಲಿಯೂ ಕೂತುಕೊಳ್ಳಬೇಕೆಂದು ವಿಧಾಯಕವಾಗಿದೆ. ಪ್ರಜೆಗಳ ಹಕ್ಕು ಯಾವಾಗಲೂ ಮೇಲೆಯೇ ಇರಬೇಕು. ಅವರ ಮರ್ಯಾದೆಗೆ ಯಾವ ವಿಷಯದಲ್ಲಿಯೂ ಕೊರತೆಯಾಗಬಾರದು. ತಮ್ಮ ಮೇಲ್ಗಡೆ ಇರತಕ್ಕ ಗೌರ್ನರ್ಸ್ ಗ್ಯಾಲರಿಯಲ್ಲಿ ನಾಲ್ಕೈದು ಚೇರ್‌ಗಳಲ್ಲಿ ಅವರಿಗೆ ಸಂಬಂಧ ಪಟ್ಟಹಾಗೆ ಕೆಲವು ಜನ ದೊಡ್ಡ ಮನುಷ್ಯರು ಕೂತುಕೊಳ್ಳುವ ಹಾಗೆ ಕೂತಿದ್ದಾರೆ. ಅಲ್ಲಿ ಯಾವಾಗಲೂ ಬಹಳ ದೊಡ್ಡ ಮನುಷ್ಯರು, ತುಂಬಾ ಪ್ರಖ್ಯಾತರಾಗಿ ಹೆಸರನ್ನು ಪಡೆದವರು ಮಾತ್ರ ರಾಜ್ಯಪಾಲರ ಅನುಮತಿಯನ್ನು ಪಡೆದು ಕುಳಿತುಕೊಳ್ಳಬೇಕು. ತಮ್ಮ ಮೇಲ್ಗಡೆ ಈಗ ಅಲ್ಲಿ ಕುಳಿತಿರುವವರೂ ಸಹ ಇತರ ಜನಗಳು ವಿಜಿಟರ್ಸ್ ಗ್ಯಾಲರಿಯಲ್ಲಿ ಕುಳಿತುಕೊಳ್ಳುವ ಹಾಗೆ ಕುಳಿತುಕೊಳ್ಳಬೇಕು. ಅಲ್ಲಿ ಒಬ್ಬ ವ್ಯಕ್ತಿ ಕಾಲು ಮೇಲೆ ಕಾಲು ಹಾಕಿಕೊಂಡು ಕೂತಿದ್ದಾರೆ. ಇದು ಇಡೀ ಸದನಕ್ಕೇ ಅವಮಾನವಾಗುವ ವಿಷಯ. ನಮ್ಮ ಘನತೆ ಗೌರವಗಳಿಗೆ ಧಕ್ಕೆ ಇದರಿಂದ ಖಂಡಿತ ಉಂಟಾಗುತ್ತದೆ. ನಿಮ್ಮ ತಲೆಯಮೇಲೆ ಇರತಕ್ಕ ರಾಜ್ಯಪಾಲರ ಗ್ಯಾಲರಿಯಲ್ಲಿ ಯಾರೋ ಒಬ್ಬ ವ್ಯಕ್ತಿ ಕಾಲುಮೇಲೆ ಕಾಲು ಹಾಕಿಕೊಂಡು ಕುಳಿತುಕೊಂಡಿರುವುದನ್ನು ನೋಡಿದರೆ, ನಮ್ಮ ಈ ಶಾಸನ ಸಭೆಗೆ ಇರತಕ್ಕ ಮನ್ನಣೆಗೆ ನಿಜವಾಗಿಯೂ ಧಕ್ಕೆ ಮಾಡಿದಂತಾಗುತ್ತದೆ. ಈ ವಿಚಾರವನ್ನು ತಾವು ಖಂಡಿತವಾಗಿ ವಿಚಾರಮಾಡಬೇಕಾಗಿದೆ. ಈ ಸಭೆಯ ಸದಸ್ಯರ ಮರ್ಯಾದೆ, ಸಭಾನದನದ ಮರ್ಯಾದೆ, ನಿಮ್ಮ ಮರ್ಯಾದೆ, ನಮ್ಮ ಮರ್ಯಾದೆ, ಇಡೀ ರಾಜ್ಯದ ಮರ್ಯಾದೆ ಇವುಗಳನ್ನು ಕಾಪಾಡುವುದಕ್ಕೆ ತಕ್ಕ ಶಾಸನಗಳುಂಟು. ಆದರೆ ಈಗಾಗಲೇ ವಿಜಿಟರ್ಸ್ ಗ್ಯಾಲರಿಯಲ್ಲಿ ಮಹಾಜನರು, ಮಹಾ ವ್ಯಕ್ತಿಗಳು ಎಷ್ಟೋ ಜನ ಕೂತಿದ್ದಾರೆ. ಅವರೆಲ್ಲರೂ ಈ ಸಭೆಯ ನಡೆವಳಿಕೆಗಳನ್ನು ಗಮನಿಸುತ್ತಿದ್ದಾರೆ. ಈ ಸಭೆಗೆ ಇರತಕ್ಕ ಮರ್ಯಾದೆಯನ್ನು ಕಾಪಾಡುವುದಕ್ಕೆ ತಕ್ಕ ಸಹಕಾರವನ್ನು ಯಾವ ರೀತಿ ಕೊಡುತ್ತಿದ್ದಾರೆಂಬುದನ್ನೂ ಸಹ ನಾವು ಗಮನಿಸಬೇಕು.

(ವಿಜಿಟರ್ಸ್ ಗ್ಯಾಲರಿಯಿಂದ ಕೈ ಚಪ್ಪಾಳೆಯಾಯಿತು.)

ಅಧ್ಯಕ್ಷರು.—ಗ್ಯಾಲರಿಯಲ್ಲಿರುವವರು ಕೈ ಚಪ್ಪಾಳೆ ಹಾಕಿದರೆ ಅಂತಹವರನ್ನು ಹೊರಗೆ ಕಳುಹಿಸಬೇಕಾಗುತ್ತದೆ. ದಯವಿಟ್ಟು ಯಾರೂ ಆ ರೀತಿ ಈ ಸಭೆಯಲ್ಲಿ ಮಾಡಬಾರದು.

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರದಲ್ಲಿ ತಾವು ಗಮನ ಕೊಡಬೇಕು. ತಮಗೆ ರೂಲ್ಸ್‌ನ್ನು ಸಸ್‌ಪೆಂಡ್ ಮಾಡುವ ಅಧಿಕಾರ ಉಂಟು. ಈ ಸಭೆಯಲ್ಲಿ ಯಾರೇ ಆಗಲಿ ಕಾಲು ಮೇಲೆ ಕಾಲು ಹಾಕಿ ಕೂತುಕೊಂಡರೆ, ಅಂತಹವರನ್ನು ಸಭೆಯಿಂದ ಉಚ್ಚಾಟನೆ ಮಾಡತಕ್ಕ ಒಂದು ಪದ್ಧತಿಯನ್ನು ಜಾರಿಗೆ ತರುವುದು ಒಳ್ಳೆಯದು. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕಾನೂನನ್ನು ತರಬಹುದು. ನಾನು ನಿಮ್ಮ ಮೇಲೆ ಕುಳಿತಿರತಕ್ಕ ವ್ಯಕ್ತಿ ಆ ರೀತಿಯಾಗಿ ಕುಳಿತುಕೊಳ್ಳಬಾರದು. ಅಂಥಾದ್ದನ್ನು ನಾನು ವಿರೋಧಮಾಡುತ್ತೇನೆ. ಅದನ್ನು ತಡೆಯುವುದಕ್ಕಾಗುವುದಿಲ್ಲ. ಆದ್ದರಿಂದ ದಯವಿಟ್ಟು ಅಲ್ಲಿರತಕ್ಕ ಕುರ್ಚಿಗಳನ್ನು ತೆಗೆದುಹಾಕಬೇಕು. ಆ ವ್ಯಕ್ತಿ ಇನ್ನೂ ಕೂಡ ಕಾಲಮೇಲೆ ಕಾಲು ಹಾಕಿಕೊಂಡು ಕೂತೇ ಇದ್ದಾರೆ. ದಯವಿಟ್ಟು ಜಾಗ್ರತೆಯಾಗಿ ಆ ರೀತಿ ಈ ಸಭೆಯಲ್ಲಿ ವರ್ತಿಸಬಾರದೆಂದು ತಾವು ಆಜ್ಞೆ ಮಾಡಬೇಕು. (ನಾಚಿಕೆಗೇಡು, ನಾಚಿಕೆಗೇಡು ಎಂಬುದಾಗಿ ಕೆಲವು ಸದಸ್ಯರು ಕೂಗಿದರು).

ಶ್ರೀ ಕೆ. ಎಚ್. ಪಾಟೀಲ್.—ಅಲ್ಲಿ ಕುಳಿತಿರುವವರಿಗೆ ಕನ್ನಡ ತಿಳಿಯುಲಲ್ಲ. ಅದಕ್ಕಾಗಿ ಆ ರೀತಿಯಾಗಿ ಇನ್ನೂ ಕೂತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ತಿಳಿಯುವ ಹಾಗೆ ಒಂದು ಸೂಚನೆಯನ್ನಾದರೂ ಕಳುಹಿಸಿ.

ಶ್ರೀ ಎಚ್. ಸಿದ್ಧವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).—ಅಧ್ಯಕ್ಷರೇ, ನನಗಂತೂ ಈ ವಿಷಯ ಚರ್ಚೆಯಾಗುತ್ತಿರುವುದನ್ನು ನೋಡಿ ಬಹಳ ಆಶ್ಚರ್ಯವಾಗಿದೆ. ಒಂದು ರೀತಿಯಲ್ಲಿ ವಿಷಯವನ್ನು ಸದಸ್ಯರು ಚೆನ್ನಾಗಿ ತಿಳಿದುಕೊಳ್ಳಲಿ ಎಂಬ ಒಂದು ಕುತೂಹಲದಿಂದ ಹೇಳುತ್ತೇನೆ. ನಾನು ದೆಹಲಿಯಲ್ಲಿ ಪಾರ್ಲಮೆಂಟಿನಲ್ಲಿರತಕ್ಕ ಪ್ರೆಸಿಡೆಂಟರ ಗ್ಯಾಲರಿಯನ್ನು ನೋಡಿದ್ದೇನೆ. ಪ್ರೆಸಿಡೆಂಟರ ಗ್ಯಾಲರಿಯಲ್ಲಿ ಕೇವಲ ಪ್ರೆಸಿಡೆಂಟರೇ ಮಾತ್ರ ಅಲ್ಲಿ ಬಂದು ಕುಳಿತುಕೊಳ್ಳಬೇಕೆಂಬ ನಿಯಮ ಇರುವುದು ನಮಗೆ ಗೊತ್ತಿಲ್ಲ. ಅಲ್ಲಿ ಪ್ರೆಸಿಡೆಂಟರಾಗಲೀ ಅವರ ಮನೆಯವರು ಯಾರೇ ಆಗಲೀ ಅಥವಾ ಅನುಮತಿಯನ್ನು ಪಡೆದವರಾಗಲೀ ಅಲ್ಲಿ ಬಂದು ಕುಳಿತುಕೊಳ್ಳಬಹುದು. ಅದೇ ರೀತಿಯಲ್ಲಿ ಇಲ್ಲಿ ರಾಜ್ಯಪಾಲರ ಗ್ಯಾಲರಿಯಲ್ಲಿ ರಾಜ್ಯಪಾಲರಾಗಲೀ ರಾಜ್ಯಪಾಲರ ಮನೆಯವರು ಯಾರೇ ಆಗಲೀ ಅಥವಾ ಅವರ ಅನುಮತಿಯನ್ನು ಪಡೆದವರಾಗಲೀ ಕುಳಿತುಕೊಳ್ಳಬಹುದು. ಅದಕ್ಕೆ ರೂಲ್ಸ್‌ನಲ್ಲಿ ಅವಕಾಶವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದೇನಾದರೂ ತಪ್ಪು ಇದ್ದರೆ, ರೂಲ್ಸ್, ಪ್ರೊಸೀಜರ್‌ನಂತೆ ನಡೆಯುವುದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ. ಅವರಿಗೆ ಕನ್ನಡ ಚೆನ್ನಾಗಿ ಗೊತ್ತಾಗಿದ್ದರೆ ಮಾನ್ಯ ಸದಸ್ಯರ ಭಾಷಣ ಕೇಳಿದ ಕೂಡಲೇ ಸರಿಯಾಗಿ ಕುಳಿತುಕೊಳ್ಳುತ್ತಿದ್ದರು. ಅವರಿಗೆ ಕನ್ನಡ ಭಾಷೆ ತಿಳಿಯಲಿಲ್ಲ. ಕನ್ನಡ ಬಾರದೇ ಇರತಕ್ಕವರು ಅಲ್ಲಿ ಕುಳಿತಿರಬಹುದು. ಒಂದು ವೇಳೆ ಈಗ ರಾಜ್ಯಪಾಲರ ಗ್ಯಾಲರಿಯಲ್ಲಿ ಕುಳಿತಿರುವವರು ನಿಜವಾಗಿ ಅವರ ಮನೆಯವರು ಆಗಿದ್ದರೆ, ಅವರ ಬಗ್ಗೆ ಈ ಸಭೆಯಲ್ಲಿ ಮಾತನಾಡುವುದು ಸರಿಯಲ್ಲ. ಈ ಸಭೆಯಲ್ಲಿ ಅವರು ಕಾಲುಮೇಲೆ ಕಾಲು ಹಾಕಿಕೊಂಡು ಕುಳಿತುಕೊಳ್ಳುವುದು ನಮಗೆ ಗೌರವವಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದು ಅದು ಅವರ ಅಭಿಪ್ರಾಯದ ಮಾತು. ಆದರೆ ಕೇವಲ ರಾಜ್ಯಪಾಲರು ಮಾತ್ರ ಅಲ್ಲಿ ಕುಳಿತುಕೊಳ್ಳಬೇಕೆಂದೂ, ಬಾಕಿಯವರಿಗೆ ಅಲ್ಲಿ ಅವಕಾಶವಿಲ್ಲವೆಂದೂ ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ನಾನೇ ನೋಡಿದ ಹಾಗೆ ದೆಹಲಿಯಲ್ಲಿ ಪ್ರೆಸಿಡೆಂಟರ ಗ್ಯಾಲರಿಯಲ್ಲಿ ಯಾರಾದರೂ ಡಿಸ್ಟಿಂಗ್ವಿಷ್ಡ್ ವಿಜಿಟರ್ಸ್ ಬಂದರೆ ಅಥವಾ ಯಾರಾದರೂ ಹೆಡ್ಸ್ ಆಫ್ ಸ್ಟೇಟ್ ಬಂದರೆ, ಅಂತಹವರು ಪ್ರೆಸಿಡೆಂಟರ ಗ್ಯಾಲರಿಯಲ್ಲಿ ಕುಳಿತಿದ್ದಂಥ ನಿದರ್ಶನಗಳು ಬೇಕಾದಷ್ಟಿವೆ. ಆದ್ದರಿಂದ ಮಾನ್ಯ ಸದಸ್ಯರಲ್ಲಿ ನನ್ನ ಒಂದು ಅರಿಕೆ ಏನೆಂದರೆ, ಈ ವಿಚಾರದಲ್ಲಿ ರೂಲ್ಸ್ ಹಾಗೂ ಕಾನೂನು ನಿಯಮಾವಳಿ ಏನಿದೆಯೆಂಬುದನ್ನು ಎಲ್ಲರೂ ತಿಳಿದುಕೊಂಡು ಆ ರೀತಿ ಎಲ್ಲರೂ ವರ್ತಿಸಬೇಕೆಂದು ನಾನು ಮಾನ್ಯ ಸದಸ್ಯರಲ್ಲಿ ಸವಿನಯದಿಂದ ಸೂಚನೆ ಮಾಡುತ್ತೇನೆ.

Sri C. M. ARUMUGAM.—Madam Speaker, what Sri Bangarappa has stated is not meant to insult or to show disrespect to the visitors in the Governor's Box. His contention is that the Governor's Box is meant solely for the Governor just as the Press Gallery is meant for Pressmen and the Officials' Gallery is meant for only officials. Of course, this is not strictly enforced as the Speaker's Gallery is not occupied exclusively by the Speaker's relatives or friends. There is the Public Gallery for other visitors and the Watch and Ward Staff while admitting them instruct as to how they should behave in the Gallery. In the same way, when the guests of the Governor came to day, the Watch and Ward Staff should have instructed them also beforehand as to how they should sit and behave while witnessing the proceedings of the House.

Obviously the Governor's Box is not solely meant for the Governor because I would ask where is the need for the Governor to come to this House on days other than the day he addresses the Legislature ?

Sri H. SIDDAVEERAPPA.—Nothing prevents the Governor from coming and watching the proceedings to know how the business is conducted here.

Sri C. M. ARUMUGAM.—The Governor's relatives and friends can be allowed to the Governor's Box. That point is not in question now. The point that we have raised now is, how the visitors should behave.

(SRI C. M. ARUMUGAM)

Just as the Governor's family and friends move in the big cars of the Governor, in the same way somebody has occupied the Governor's Gallery.

Sri S. BANGARAPPA.—Not only his relatives and friends but also the Governor's dog.

Sri C. M. ARUMUGAM.—Even Governor's relatives and friends cannot behave as they like.

Sri H. SIDDAVEERAPPA.—I appeal to the hon. Member not to unnecessarily drag the name of the Governor.

Sri C. M. ARUMUGAM.—Why ?

Sri H. SIDDAVEERAPPA.—For the reason that he is the Head of the State here. We cannot do anything derogatory to his position.

ಶ್ರೀ ಕೋಣಂದೂರು ಲಂಗಪ್ಪ.—ತಾವು ಇರತಕ್ಕ ಕಾನೂನನ್ನು ದುರುಪಯೋಗಪಡಿಸಿ ಕೊಂಡರೆ ನಾವೇನು ಹೇಳಬೇಕು ? ಇದರ ಬಗ್ಗೆ ನಿಮ್ಮ ಕಾನೂನೂ, ಇಷ್ಟೂ, ಏನಿದೆ ಹೇಳಿ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಕೊನೆಯದಾಗಿ ನಿಮಗೆ ಪ್ರಾರ್ಥನೆ ಮಾಡುವುದೇನೆಂದರೆ, ಈ ವಿಷಯವನ್ನು ಇನ್ನು ಹೆಚ್ಚಿಗೆ ಚರ್ಚೆಮಾಡದೆ ಇಲ್ಲಿಗೇ ಬಿಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ರಾಜ್ಯಪಾಲರಿಗೆ ಮಾತ್ರ ಅವಕಾಶವಿದೆ. ಬೇರೆ ಯಾವರು ಅಲ್ಲಿ ಬಂದು ಕಾಲು ಮೇಲೆ ಕಾಲು ಹಾಕಿ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲ. ಅಲ್ಲಿ ಹಾಕಿಸಿರತಕ್ಕ ಕುರ್ಚಿಯನ್ನು ಅಲ್ಲಿಂದ ತೆಗೆಸಿ ಹಾಕಿ.....

Sri C. M. ARUMUGAM.—I suggest that the Governor's gallery should be shifted.

Sri H. SIDDAVEERAPPA.—It does not mean that those who sit there are sitting above the head of the Speaker. Over the head of the Speaker there is that canopy.

2-30 P.M.

ಶ್ರೀ ವಾಟಾಳ್ ನಾಗರಾಜ್.—ಈಗ ಒಂದು ಪ್ರಶ್ನೆ ಏನಾಗಿದೆ ಎಂದರೆ.....

ಅಧ್ಯಕ್ಷರು.—ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಬೇಕು.....

(ಸಭೆಯಲ್ಲಿ ಶ್ರೀಯುತ ಕೋಣಂದೂರು ಲಂಗಪ್ಪ, ಬಂಗಾರಪ್ಪ, ಅರ್ಮುಗಂ, ವಾಟಾಳ್ ನಾಗರಾಜ್ ಇವರೆಲ್ಲರೂ ನಿಂತಿದ್ದರು)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷಣಿಯರೇ.....ನಿಮ್ಮ ತಲೆಯಮೇಲೆ ಅಲ್ಲಿ.....

ಅಧ್ಯಕ್ಷರು.—ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನನ್ನ ತಲೆಯಮೇಲೆ ಯಾರೂ ಕುಳಿತಿಲ್ಲ. ನನ್ನ ತಲೆಯಮೇಲೆ ನನ್ನ ತಲೆಯೇ ಇದೆ ಅವರಿಗೆ ಹಾಗೆ ಕುಳಿತುಕೊಳ್ಳಬಾರದು ಎನ್ನುವುದು ಗೊತ್ತಿಲ್ಲದೆ ಹಾಗೆ ಮಾಡಿರಬಹುದು. ಅದಕ್ಕೆ ಹೇಳಿಕಳುಹಿಸೋಣ. ಅವರಿಗೆ ನಮ್ಮ ಕನ್ನಡಭಾಷೆ ಗೊತ್ತಾಗುವುದಿಲ್ಲ.

Sri C. M. ARUMUGAM.—It is objectionable ; what applies to the Visitors' Gallery should apply to the Governor's Gallery also.

ಅಧ್ಯಕ್ಷರು.—ನೀವುಗಳು ಯಾರೂ ತಿಳಿಯದೆ ಹಾಗೆ ತಪ್ಪು ಮಾಡುವುದಿಲ್ಲವೇ ! ಈ ವಿಷಯ ಇಲ್ಲಿಗೆ ಕೈ ಬಿಡೋಣ. ಇದನ್ನು ಇನ್ನು ಯಾರೂ ಲಂಬಿಸುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಇದು ಈ ಸಭೆಯ ಮಾನ ಮರ್ಯಾದೆಗೆ ಸಂಬಂಧಪಟ್ಟ ವಿಷಯ. ತಾವು ಈ ವಿಚಾರದಲ್ಲಿ ಸೂಕ್ತ ತಿಳುವಳಿಕೆಯಿಂದ ಕೂಡಿದ ಒಂದು ಸರ್ಕ್ಯುಲರನ್ನು ಹೊರಡಿಸಿ ಅದನ್ನು ಎಲ್ಲರಿಗೂ ಕೊಡುವ ಹಾಗೆ ಮಾಡಬೇಕೆಂದು ನನ್ನ ಸಲಹೆ.

ಅಧ್ಯಕ್ಷರು.—ಸಾಮಾನ್ಯ ಆಯವ್ಯಯದ ಮೇಲಿನ ಚರ್ಚೆಯನ್ನು ಮುಂದುವರಿಸೋಣ.

ಈಗ ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು ಅವರು ತಮ್ಮ ಭಾಷಣವನ್ನು ಪ್ರಾರಂಭಮಾಡ ಬಹುದು.

Revised Budget Estimates for 1972-73

re :—**General Discussion**

(*Debate Contd.*)

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ).–ಸನ್ಮಾನ್ಯ ಅಧ್ಯಕ್ಷಿಣಿಯರೇ, ನಮ್ಮ ಮಾನ್ಯ ಆರ್ಥಿಕ ಸಚಿವರು ಸಭೆಯ ಮುಂದೆ ಮುಂಡಿಸಿರತಕ್ಕ ಆಯವ್ಯಯ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇವೇ ನಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕೆಂದು ಇಚ್ಛಿಸುತ್ತೇನೆ. ನಮ್ಮ ಬಡ್ಜೆಟ್ಟಿನಲ್ಲಿ ನಮಗೆ ಒಂದು ಬಹಳ ಮುಖ್ಯ ವಾದ ಅಡಚಣೆ ಏನಿತ್ತು ಎಂದರೆ ಅದು ಓವರ್ ಡ್ರಾಫ್ಟಿಗೆ ಸಂಬಂಧಪಟ್ಟದ್ದಾಗಿತ್ತು. ನಮ್ಮ ಹಿಂದಿನವರು ಆಡಳಿತ ನಡೆಸಿದ್ದರ ಪ್ರಸಾದ ಅದು. ಅದನ್ನು ನಮ್ಮ ಹಣಕಾಸಿನ ಸಚಿವರು ಈಗ ತೀರಿಸಿ ನಮಗೆ ಅದರ ನೋಪಿಲ್ಲದಂತೆ ಮಾಡಿದ್ದಾರೆ. ನಮ್ಮ ಹಾಸಿಗೆ ಎಷ್ಟಿದೆಯೋ ಅಷ್ಟಕ್ಕೆ ತಕ್ಕಂತೆ ಕಾಲು ಚಾಚಿಕೊಳ್ಳೋಣ ಎಂಬ ತತ್ವಕ್ಕನುಸಾರವಾಗಿ ಆ ಓವರ್ ಡ್ರಾಫ್ಟನ್ನು ತೀರಿಸಿರುತ್ತಾರೆ.

ಆದರೆ ನಮ್ಮಲ್ಲಿ ದೇಶಾಭಿವೃದ್ಧಿಗಾಗಿ ಹಣವನ್ನು ವೆಚ್ಚಮಾಡತಕ್ಕ ಇರಾಖೆಗಳು ಅನೇಕವಾಗಿವೆ. ಅವುಗಳಿಗೆ ಸರ್ಕಾರದವರು ಈಗ ಒದಗಿಸಿರುವ ಹಣ ಕೆಲವು ಇರಾಖೆಗಳಿಗೆ ಸಾಲದು ಎಂದು ತಿಳಿಸುವುದಕ್ಕೆ ನಾನು ಇಚ್ಛಿಸುತ್ತೇನೆ. ಸಾಯಿಲ್ ಕನ್‌ಸರ್‌ವೇಷನ್ ಬಾಬಿಗೆ 16.79 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಹಾಗೇ ಬ್ಯಾಕ್‌ವರ್ಡ್ ಕ್ಲಾಸಿನ ಅಭಿವೃದ್ಧಿಸಾಧನೆಗಾಗಿ ಒಂದು ಕೋಟಿ ಐವತ್ತುಲಕ್ಷ ರೂಪಾಯಿ ಇಟ್ಟಿರತಕ್ಕ ಈ ಹಣ ಏತಕ್ಕೂ ಸಾಲದು ಎಂದು ಹೇಳುತ್ತೇನೆ. ಈ ಬ್ಯಾಕ್‌ವರ್ಡ್ ಕ್ಲಾಸಿನ ವಿಚಾರದಲ್ಲಿ ನನಗೆ ಇನ್ನೂ ಒಂದು ಸಂದೇಹವಿದೆ. ಅದೇನೆಂದರೆ ಈ ಕ್ಲಾಸಿನ ವ್ಯಾಪ್ತಿಯಲ್ಲಿ ಯಾವ್ಯಾವ ಜಾತಿಗಳು ಬರುತ್ತವೆ ಎಂಬುದನ್ನು ಇಲ್ಲಿಯವರೆಗೆ ಯಾರೂ ನಿರ್ಧರಿಸಿಲ್ಲ. ಇದನ್ನು ಪರಿಶೀಲನೆ ಮಾಡಬೇಕೆಂದು ಸರ್ಕಾರಕ್ಕೆ ನಾನು ಬ್ಯಾಕ್‌ವರ್ಡ್ ಕ್ಲಾಸಿನ ಕನ್‌ವೀನರಾಗಿ ಮನವಿಯನ್ನು ಸಲ್ಲಿಸಿದ್ದೇನೆ. ಆ ಮನವಿಯಲ್ಲಿ ಯಾರು ಬ್ಯಾಕ್‌ವರ್ಡ್ ತರಗತಿಗೆ ಸೇರಿದ್ದಾರೆ ಯಾರು ಫಾರ್‌ವರ್ಡ್ ತರಗತಿಗೆ ಸೇರಿದ್ದಾರೆ ಎಂಬುದನ್ನು ನಿರ್ಧರಿಸಲು ಒಂದು ಕಮಿಷನ್ನನ್ನು ನೇಮಕ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಈ ಹಿಂದುಳಿದ ವರ್ಗ ಗಳ ಅಭಿವೃದ್ಧಿಗಾಗಿ ತೆಗೆದಿಟ್ಟಿರುವ ಹಣ ಒಂದು ಕೋಟಿ 50 ಲಕ್ಷ ರೂಪಾಯಿ ಏನಿದೆ ಅದು ಸಾಲದು. ರಾಜ್ಯದಲ್ಲಿ ಈ ಹಿಂದುಳಿದ ವರ್ಗದಲ್ಲಿರತಕ್ಕವರ ಸಂಖ್ಯೆ ರಾಜ್ಯದ ಪ್ರಜಾಸಂಖ್ಯೆಯಲ್ಲಿ ಶೇಕಡ 60 ಕ್ಕೂ ಮೇಲ್ಪಟ್ಟಿದೆ. ಅಷ್ಟು ಜನರ ಪುರೋಭಿವೃದ್ಧಿಗೆ ಈ ಹಣ ಏನೇನೂ ಸಾಲದು. ಆಂಧ್ರ ಮತ್ತು ತಮಿಳು ನಾಡುಗಳಲ್ಲಿ ಸೈಂಟಿಫಿಕ್ ಮತ್ತು ಇನ್ನು ಇತರೇ ಶಾಲಾ ಕಾಲೇಜುಗಳಿಗೆ ಅದರಲ್ಲೂ ಪ್ರೊಫೆಷನಲ್ ಮತ್ತು ಟೆಕ್ನಿಕಲ್ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡುವಾಗ ಯಾರು ಹಿಂದುಳಿದ ವರ್ಗದವರು ಯಾರು ಅಲ್ಲ, ಎಂಬುದನ್ನು ನಿರ್ಧರ ಮಾಡಲು ಒಂದು ಹಿಂದುಳಿದವರ್ಗಗಳ ಕಮಿಷನ್ನನ್ನು ನೇಮಕ ಮಾಡಬೇಕೆಂದು ಕೇಳುತ್ತೇನೆ. ಇನ್ನು ಈ ಹಿಂದುಳಿ ದವರು ಮತ್ತು ಮುಂದುವರಿದವರು ಎಂಬ ಪ್ರಶ್ನೆ ಸರ್ಕಾರಿ ಉದ್ಯೋಗಗಳನ್ನು ಪಡೆಯುತಕ್ಕ ಕಾಲ ದಲ್ಲಿ ಉದ್ಭವವಾಗುತ್ತದೆ. ಈ ಹಿಂದೆ ಮೈಸೂರು ರಾಜ್ಯದಲ್ಲೂ ಕೂಡ ಅಂಥಾ ಕೆಲವು ಕಮಿಟಿ ಗಳನ್ನು ಮಾಡಿದ್ದರು. ಮಿಲ್ಲರ್ ಕಮಿಟಿ, ವೀರಪ್ಪ ಕಮಿಟಿ ಮತ್ತು ಡಾಕ್ಟರ್ ನಾಗನಗೌಡ ಕಮಿಟಿ—ಎಂದು ಕೆಲವು ಕಮಿಟಿಗಳನ್ನು ಮಾಡಿದ್ದರು. ಆದರೆ ರಾಜ್ಯದಲ್ಲಿ ಈ ದಿವಸ ಈ ನೊಂದು